815(296) ಶ್ರೀ ನರೇಂದ್ರ ನೆಲ (ರಾಜಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 2004 ರಿಂದ 2007 ರವರೆಗೆ ಅಬಕಾರಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು,

ಆ) ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಆಗಿರುವ ಹೊರೆ ಎಷ್ಟು , ಈ ನಷ್ಟವನ್ನು ಯಾವ ರೂಪದಲ್ಲಿ ಭರಿಸಲಾಗುವುದು ,

ಇ) ಸಾರಾಯಿ ನಿಷೇಧ, ರೈತರ ಸಾಲ ಮನ್ನಾ ಮತ್ತು ಲಾಟರಿ ನಿಷೇಧರಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಯಾವ ರೀತಿಯಲ್ಲಿ ಭರಿಸಲಾಗುವುದು ,

ಈ) ಕಳೆದ 3 ವರ್ಷಗಳ ಆರ್ಥಿಕ ಸಾಲಿನಲ್ಲಿ ನೀರಾವರಿ ಅಭಿವೃದ್ಧಿಗಾಗಿ ಕಾಯ್ದಿರಿಸಲಾದ ಮೊತ್ತ ಎಷ್ಟು ?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) 2004 ರಿಂದ 2007 ರವರೆಗೆ ಅಬಕಾರಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯದ ವಿವರಗಳು ಈ ಕೆಳಕಂಡಂತಿವೆ

1	2004–05	2831 34 ಕೋಟಿ ರೂ ಗಳು
2	2005–06	3414 94 ಕೋಟಿ ರೂ ಗಳು
3	2006–07	4525 44 ಕೋಟಿ ರೂ ಗಳಿ

ಆ) ಸಾರಾಯಿ ನಿಷೇಧದಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ಹೊರೆ ಸುಮಾರು 1900 ಕೋಟಿ ರೂ ಗಳು

ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಭರಿಸಲು ಯಾವುದೇ ಪರ್ಯಾಯ ಕ್ರಮಗಳನ್ನು ಸರ್ಕಾರ ಯೋಜಿಸಿರುವುದಿಲ್ಲ ಆದರೆ ಈ ನಷ್ಟವನ್ನು ಸರ್ಕಾರಕ್ಕೆ ಬರಬೇಕಾದ ಬೇರೆ ರಾಜ್ಯಸ್ವಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮೂಲಕ ಭರಿಸಲಾಗವುದು

ಇ) ಸಾರಾಯಿ ನಿಷೇಧದಿಂದ ಆಗಿರುವ ನಷ್ಟವನ್ನು ಸರ್ಕಾರವು ಭರಿಸುವ ಬಗ್ಗೆ ಮೇಲಿನ 'ಆ' ಪ್ರಶ್ನೆಯಲ್ಲಿ ಒದಗಿಸಲಾಗಿದೆ

ರೈತರ ಸಾಲ ಮನ್ನಾದಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಬೇರೆ ಬೇರೆ ಮೂಲಗಳಿಂದ ಆದಾಯ ಕ್ರೋಢಿಕರಿಸಿಕೊಳ್ಳುವ ಮೂಲಕ ಭರಿಸಲಾಗುವುದು

ಲಾಟರಿ ನಿಷೇಧದಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಬೇರೆ ಬೇರೆ ಮೂಲಗಳಿಂದ ಇತರೆ ಆದಾಯ ಕ್ರೋಢೀಕರಿಸಿ ಸರಿದೂಗಿಸಿಕೊಂಡು ನಷ್ಟ ಭರಿಸಲಾಗುವುದು

ಈ)

(ರೂ ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಆಯವ್ಯಯದ ಅನುದಾನ		
		ಭಾರಿ ಮತ್ತು ಮಧ್ಯಮ	ಕಾಡಾ	ಒಟ್ಟು
1	2004–05	169315 59	2271 88	171587 47
2	2005–06	286440 62	4672 00	291112 62
2	2006–07	323744 65	5040 40	323785 05

816(298) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಜಮೀನುಗಳ ಸರ್ವೆಯನ್ನು ಅಮೂಲಾಗ್ರವಾಗಿ ಯಾವ ವರ್ಷದಲ್ಲಿ ಮಾಡಲಾಗಿದೆ

ಆ) ಹೊಸದಾಗಿ ಸರ್ವೆ ಕಾರ್ಯವನ್ನು ಆರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ,

ಇ) ರಾಜ್ಯದಲ್ಲಿರುವ ಒಟ್ಟು ಸರ್ವೆ ನಂಬರುಗಳು ಎಷ್ಟು ಹಾಗೂ ಅವು ಯಾವುದು ,

ಈ) ಸರ್ವೆ ಕಾರ್ಯವನ್ನು ಖಾಸಗಿ ವ್ಯಕ್ತಿಗಳಿಗೆ ವಹಿಸಿರುವುದರಿಂದ ಹಲವಾರು ಜಮೀನುದಾರರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ರಾಜ್ಯದಲ್ಲಿರುವ ಸರ್ವೆಯರ್ ಹುದ್ದೆಗಳು ಎಷ್ಟು , ಅದರಲ್ಲಿ ನೇಮಕಾತಿ ಮಾಡದೆ ಬಾಕಿ ಉಳಿದಿರುವ ಹುದ್ದೆಗಳು ಎಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಭೂಮಾಪನ ಕಾರ್ಯವು ಈ ಕೆಳಗೆ ವಿವರಿಸಿರುವ ಅವಧಿಯಲ್ಲಿ ಕೈಗೊಳ್ಳಲಾಗಿರುತ್ತದೆ –

ಅ) ಹಳೆ ಮೈಸೂರು ಪ್ರಾಂತ್ಯದಲ್ಲಿ 1863 ರಿಂದ 1898

ಆ) ಮುಂಬೈ ಕರ್ನಾಟಕ ಪ್ರಾಂತ್ಯದಲ್ಲಿ 1840 ರಿಂದ 1863

ಇ) ಮದರಾಸು ಪ್ರಾಂತ್ಯದಲ್ಲಿ 1863 ರಿಂದ 1904

ಈ) ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ 1875 ರಿಂದ 1888

ಉ) ಕೊಡಗು ಪ್ರಾಂತ್ಯದಲ್ಲಿ 1806 ರಿಂದ 1816

ಆ) ಇಲ್ಲ

ಇ) 1994ರ ಲಭ್ಯವಿರುವ ಮಾಹಿತಿಯಂತೆ ರಾಜ್ಯದಲ್ಲಿ 44,64,240 ಸರ್ವೆ ನಂಬರುಗಳಿದ್ದು, ಈ ಪೈಕಿ ಪೋಡಾದ ಹಿಸ್ಸೆ ನಂಬರುಗಳು 10163762 ಇರುತ್ತವೆ

ಕ-೨೨